

(ಆಪೂಸು ಎಂದರೆ ಭಾರತದ ಪಶ್ಚಿಮ ಭಾಗಗಳಲ್ಲಿ ಹಣ್ಣಿನ ರಾಜ ಎಂದೂ ಕರೆಯಲಾಗುತ್ತದೆ).

ಇನ್ನೂ ಕೆಲವು ಪುಸ್ತಕಗಳ ಪ್ರಕಾರ ಮೌರ್ಯರ ಕಾಲದಿಂದಲೂ ಆಪೂಸ್ ಮಾವು ಭಾರತದಲ್ಲಿ ಹೆಚ್ಚು ಜನಪ್ರಿಯತೆ ಪಡೆದಿತ್ತು ಎಂಬ ಮಾತೂ ಇದೆ. ಆದರೆ ಈ ಕುರಿತು ಸಮಗ್ರ ಅಧ್ಯಯನ ನಡೆದಿಲ್ಲದ ಕಾರಣ ಇದರ ಇತಿಹಾಸ ಕುರಿತು ಸ್ಪಷ್ಟ ಮಾಹಿತಿ ಇಲ್ಲ.

ಆದರೂ ಕೃಷಿ ವಿಜ್ಞಾನಿ ಡಾ. ವೈ.ಎಲ್. ನೆನೆ ಅವರು 2001ರಲ್ಲಿ ದಿ ಜರ್ನಲ್ ಆಫ್ ಏಷಿಯನ್ ಅಗ್ರಿ ಹಿಸ್ಟರಿಯಲ್ಲಿ ಪ್ರಕಟಿಸಿದ ಸಂಶೋಧನಾ ಪ್ರಬಂಧ 'ಮ್ಯಾಂಗೊ ಥ್ರೂ ಮಿಲ್ಲೇನಿಯಾ'ದಲ್ಲಿ ಈ ಮಾವಿನ ಕುರಿತು ಒಂದಷ್ಟು ಮಾಹಿತಿಗಳನ್ನು ದಾಖಲಿಸಿದ್ದಾರೆ.

ಭಾರತೀಯರು ಮಾವನ್ನು ಕತ್ತರಿಸಿ ತಿನ್ನುವುದಕ್ಕಿಂತಲೂ, ಇಡಿಯಾದ ಹಣ್ಣನ್ನು ಕೈಯಲ್ಲಿ ಹಿಡಿದು ಬಾಯಲ್ಲಿ ರಸ ಹೀರುತ್ತಾ ತಿನ್ನುವುದನ್ನು ಇಷ್ಟಪಡುತ್ತಾರೆ. ಹೀಗಾಗಿ ಮೃದು ಖಂಡ, ಹೆಚ್ಚು ರಸವುಳ್ಳ ಆಪೂಸು ಮಾವನ್ನೇ ಹೆಚ್ಚು ಅಪೇಕ್ಷಿಸುತ್ತಾರೆ ಎಂದಿದ್ದಾರೆ. ಪೋರ್ಚುಗೀಸರು ಹೆಚ್ಚು ಇಷ್ಟಪಡುತ್ತಿದ್ದ ಈ ಮಾವನ್ನು ರಫ್ತು ಮಾಡಲು ಇಚ್ಛಿಸಿದ್ದರು. ಹೀಗಾಗಿ 1550ರಿಂದ 1575ರ ಅವಧಿಯಲ್ಲಿ ಜೆಸೂಟ್ ಪ್ರೀಸ್ಟ್ ಎಂಬುವವರು ಈ ಮಾವಿನ ಸಸಿಗಳ ಕಸಿ ಕಟ್ಟುವ ಪ್ರಕ್ರಿಯೆ ಆರಂಭಿಸಿದರು. ಹೀಗಾಗಿ ಈ ಅವಧಿಯಲ್ಲಿ ಆಪೂಸು ಮಾವು ಬೆಳೆಯುವ ಪ್ರದೇಶ ಹೆಚ್ಚಳವಾಯಿತು. ಆಪೂಸು ಮಾವಿನ ಜತೆಗೇ ಪೀರ್ಸ್, ರೆಬೆಲ್ಲೊ, ಫರ್ನಾಂಡಿಯಾ, ಫಿಲಿಪಿನಿಯಾ, ಆಂಟೊನಿಯೊ ಎಂಬಿತ್ಯಾದಿ ಹೆಸರುಗಳನ್ನಿಟ್ಟರು. ಆದರೆ ಹೆಚ್ಚು ಜನಪ್ರಿಯಗೊಂಡಿದ್ದು ಆಪೂಸು ಮಾತ್ರ ಎಂದಿದ್ದಾರೆ.

ಧಾರವಾಡದಲ್ಲಿ ಸುಮಾರು 50ರ ದಶಕದಲ್ಲಿ ಆಲ್ಫಾನ್ಸೊ ಮಾವನ್ನು ವ್ಯಾಪಕವಾಗಿ ಬೆಳೆಯಲಾರಂಭಿಸಲಾಯಿತು ಎಂದು ಇಲ್ಲಿನ ಕೆಲ ಹಿರಿಯರು ಹೇಳುತ್ತಾರೆ. ದೇವರಹುಬ್ಬಳ್ಳಿ ಗುಂಗಮಾವು..., ಕ್ಯಾರಕೊಪ್ಪದ ಬಾಳಮಾವು... ಜೋಗೆಲ್ಲಾಪೂರದ ಸಕ್ಕರೆ ಗುಟ್ಲಮಾವಿನ ಹಣ್ಣು ಸುಲಿದು..., ಮಹಾಲಿಂಗಪೂರ ಬೆಲ್ಲ ಹಾಕಿ..., ಸೌವದತ್ತಿ ಬಾಳೆಹಣ್ಣು ಕಿವುಚಿ... ಶಿಕಾರಿಪುರ ಯಾಲಕ್ಕಿ ಹಾಕಿ ಮಾಡುವ ರಸಾಯನವೇ ಸೀಕರಣೆ ಎಂಬ ಜನಪದ ಇಂದಿಗೂ ಹಲವರ ಬಾಯಲ್ಲಿದೆ.

ಆದರೆ ಇಲ್ಲಿದ್ದ ಈ ಎಲ್ಲಾ ಮಾವುಗಳ ಜಾಗವನ್ನೂ ಆಪೂಸು ಆವರಿಸಿದೆ. ಜಿಲ್ಲೆಯಲ್ಲಿ ಸುಮಾರು 8500 ಹೆಕ್ಟೇರ್ ಜಾಗದಲ್ಲಿ ಆಪೂಸು ಮಾವು ಬೆಳೆಯಲಾಗುತ್ತಿದೆ. ವಾರ್ಷಿಕ ಪ್ರತಿ ಹೆಕ್ಟೇರ್‌ಗೆ ಸರಾಸರಿ 11 ಟನ್ ಇಳುವರಿ ತೆಗೆಯಲಾಗುತ್ತಿದೆ. ಇಲ್ಲಿನ ಚಿಕ್ಕಮಲ್ಲಿಗವಾಡ ಬಳಿ ಇದರ ಮಾರುಕಟ್ಟೆಯೂ ಇದೆ. ಧಾರವಾಡದಿಂದ ಮುಂಬೈ ಅಲ್ಲಿಂದ ದೇಶ ಹಾಗೂ ವಿದೇಶಗಳಿಗೂ ಆಪೂಸು ಪ್ರಯಾಣಿಸುತ್ತದೆ.

ಅಷ್ಟಕ್ಕೂ ಭಾರತಕ್ಕೆ ಆಮದಾಗುತ್ತಿರುವ ಹಾರ್ಲೆ ಡೇವಿಡ್ಸನ್ ಆಪೂಸು ಬೆಳೆಯುವ ಹೆಚ್ಚು ರೈತರಿಗೆ ತಿಳಿದಿಲ್ಲ. ಆದರೆ ಹಾರ್ಲೆ ಓಡಿಸುವ ಪ್ರತಿಯೊಬ್ಬ ಅಮೆರಿಕನ್ನರಿಗೂ ಇಲ್ಲಿನ ಮಾವಿನ ಪರಿಚಯವಿದೆ. ಅಮೆರಿಕಕ್ಕೆ ಪ್ರತಿ ವರ್ಷ 600ರಿಂದ 800 ಟನ್ ಆಪೂಸು ರಫ್ತಾಗುತ್ತದೆ. ಅಮೆರಿಕಕ್ಕೆ ಮಾತ್ರವಲ್ಲ, ಐರೋಪ್ಯ ರಾಷ್ಟ್ರಗಳಿಗೆ ಮೂರು ಸಾವಿರ ಟನ್ ರಫ್ತಾಗುತ್ತಿದೆ. ಮಧ್ಯಪ್ರಾಚ್ಯಕ್ಕೆ 30ಸಾವಿರ ಟನ್ ರಫ್ತಾಗುತ್ತಿದೆ. ಹೀಗಾಗಿ ಈ ಮಾವಿನ ಜಾಗತಿಕ ವಹಿವಾಟು ₹450 ಕೋಟಿಗೂ ಹೆಚ್ಚು.

2007ರಿಂದ 2020ರವರೆಗೆ ಭಾರತಕ್ಕೆ ರಫ್ತಾಗುತ್ತಿದ್ದ ಹಾರ್ಲೆ ಡೇವಿಡ್ಸನ್ ಬೈಕುಗಳಿಗೆ ಬೇಡಿಕೆ ಏರದ ಕಾರಣ ಕಳೆದ ವರ್ಷ ತನ್ನ ಭಾರತದ ವಹಿವಾಟನ್ನು ಸ್ಥಗಿತಗೊಂಡಿತು. ಆದರೆ ಈ ಬೈಕಿಗೆ ಬದಲಾಗಿ ರಫ್ತಾಗುತ್ತಿರುವ ಆಪೂಸಿಗೆ ಮಾತ್ರ ವರ್ಷದಿಂದ ವರ್ಷಕ್ಕೆ ಬೇಡಿಕೆ ಏರುತ್ತಲೇ ಇದೆ.



ಮೈಸೂರಿನ ಅಕ್ಬರ್ ರಸ್ತೆಯ ಮಾವಿನ ಹಣ್ಣಿನ ಅಂಗಡಿಯಲ್ಲಿ ಹಣ್ಣಿನ ಗುಣಮಟ್ಟ ತೋರಿಸುತ್ತಿರುವ ವ್ಯಾಪಾರಿ. ಚಿತ್ರ: ಅನೂಪ್ ರಾಘ ಟಿ.

**15 ಲಕ್ಷ ಮೆಟ್ರಿಕ್ ಟನ್**
ರಾಜ್ಯದಲ್ಲಿ ಪ್ರತಿ ವರ್ಷದ ಮಾವು ಉತ್ಪಾದನೆ

ಬಣ್ಣ ಹೊಂದಿವೆ. ಒಣ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ.

## ದಶೇಹರಿ

ರಸಭರಿತವಾದ ದಶೇಹರಿ ಮಾವನ್ನು ಉತ್ತರ ಭಾರತದ ವಿವಿಧ ಭಾಗಗಳ ಜೊತೆಗೆ ನೇಪಾಳ ಮತ್ತು ಪಾಕಿಸ್ತಾನದಲ್ಲೂ ಬೆಳೆಯಲಾಗುತ್ತದೆ. ಉತ್ತರ ಪ್ರದೇಶದ ದಶೇಹರಿ ಗ್ರಾಮದಿಂದ ಮಾವಿಗೆ ಈ ಹೆಸರು ಬಂದಿದೆ. 18ನೇ ಶತಮಾನದಲ್ಲಿ ಲಖನೌ ನವಾಬನ ತೋಟಗಳಲ್ಲಿ ಬೆಳೆಯಲಾಗುತ್ತಿತ್ತು ಎನ್ನುತ್ತದೆ ಇತಿಹಾಸ. ಮಧ್ಯಮ ಮಾಸಿಕ ತಳಿಯ ಈ ಮಾವು ಜೂನ್‌ನಿಂದ ಲಭ್ಯವಿರಲಿದೆ. ಹಣ್ಣುಗಳು ಸಾಧಾರಣ ಗಾತ್ರದ ಅಂಡಾಕಾರವಿದ್ದು, ಹಳದಿ ಬಣ್ಣ ಹೊಂದಿರುತ್ತವೆ. ಇದರ ವಾಟೆ ಸಣ್ಣಗಿದ್ದು, ಹೆಚ್ಚು ದಿನ ಕೆಡುವುದಿಲ್ಲ. ಸಿಹಿ ರುಚಿಯಿಂದಾಗಿ ಮಾವಿನ ಪ್ರಿಯರಲ್ಲಿ ಬಹಳ ಜನಪ್ರಿಯವಾಗಿದೆ.

## ನೀಲಂ

ತಮಿಳುನಾಡಿನ ಸ್ಥಳೀಯ ಮಾವಿನ ವಾಣಿಜ್ಯ ವಿಧವಾಗಿದೆ. ಆಂಧ್ರಪ್ರದೇಶದಲ್ಲಿ ಹೆಚ್ಚಾಗಿರುವ